ನೀವು ನನ್ನಿಂದ ಸ್ನೇಹಕ್ಕೂ ಮೀರಿಗಿಲಾಗಿ ಇನ್ನೇನೊ ಬಯಸಿದಂತೆ ಅನಿಸಿತು. ಹಾಗಾಗಿ ನಿಮ್ಮ ಮಾತುಗಳಿಗೆ ನಾನು ಪ್ರಕ್ರಿಯಿಸಲಿಲ್ಲ. ನಿಮ್ಮ ಉದ್ದೇಶಕ್ಕೆ ನನ್ನ ಸಹಮತವಿಲ್ಲ. ಆದ್ದರಿಂದ ನಾವು ಮತ್ತೆ ಭೇಟಿಯಾಗಲು ಸಾಧ್ಯವಿಲ್ಲ ಅನಿಸುತ್ತದೆ' ಎಂದು ಮೇದಿನಿ ಬರೆದಿದ್ದಳು. ಅದನ್ನು ಓದಿದ ಮೋಹನ ಅದಕ್ಕೆ ಉತ್ತರಿಸಿದ.

'ನೀವು ನನ್ನ ಉದ್ದೇಶವನ್ನು ಸೂಕ್ಷ್ಮವಾಗಿಯೇ ಅರ್ಥೈಸಿಕೊಂಡಿದ್ದೀರಿ. ನಿಮಗೆ ಸುಳ್ಳು ಹೇಳುವ ಅಗತ್ಯವಂತೂ ನನಗಿಲ್ಲ. ನಿಮ್ಮಿಂದ ಸ್ನೇಹಕ್ಕೆ ಮಿಗಿಲಾಗಿ ಇನ್ನೇನೊ ಬಯಸಿ, ಪ್ರಯತ್ನಿಸಿದ್ದು ನಿಜ. ಆದರೆ, ಒತ್ತಾಯದಿಂದ ನಿಮ್ಮ ಮೇಲೆ ಹೇರುವ ಉದ್ದೇಶವಂತೂ ನನಗಿರಲಿಲ್ಲ. ಅದನ್ನೂ ನೀವು ಅರ್ಥ ಮಾಡಿಕೊಳ್ಳಬೇಕು. ನೀವು ನನ್ನ ಆಕಾಂಕ್ಷೆಗೆ ದಕ್ಕುತ್ತೀರೊ ಇಲ್ಲವೋ ಎಂಬುದು ನನಗೂ ತಿಳಿಯದ ವಿಷಯ. ಆದರೆ, ಕಡೆ ಪಕ್ಷ ನಿಮ್ಮ ಸ್ನೇಹವಾದರೂ ಉಳಿದುಕೊಳ್ಳಲಿ ಎಂಬುದು ನನ್ನ ಆಶಯ. ಈ ಹಿನ್ನೆಲೆಯಲ್ಲಿ ನಿಮ್ಮ ಮೌನ ಅಸಹನೀಯ ಅನಿಸುತ್ತಿದೆ. ನೀವು ಪ್ರತಿಕ್ರಿಯಿಸದಿದ್ದರೆ ಬೇಸರವಾಗುತ್ತದೆ. ನನ್ನ ಸಂದೇಶಗಳಿಗೆ ನಿಮ್ಮ ಒಂದು ಶಬ್ದದ ಉತ್ತರವೂ ಹಿತವಾಗಿರುತ್ತದೆ.'

ಮೋಹನನ ಈ ಸಂದೇವನ್ನು ಓದಿದ ಮೇದಿನಿ ಮತ್ತೆ ಪ್ರತಿಕ್ರಿಯಿಸಲಿಲ್ಲ. ಅದರಿಂದ ಅವನಿಗೆ ಮತ್ತೆ ನಿರಾಶೆಯಾಯಿತು. ಹೀಗೆ ಅವಳ ಕುರಿತ ಭಾವನೆಗಳ ತಾಕಲಾಟದಲ್ಲೇ ಹಲವು ದಿನಗಳು ಕಳೆದವು. ಮತ್ತೆ ಅವಳನ್ನು ನೋಡುವ, ಮಾತನಾಡುವ ತುಡಿತ ಅವನಲ್ಲಿ ಜೀವಂತವಾಗಿಯೇ ಇತ್ತು. 'ಅವಳ ಸಮ್ಮತಿ ಇಲ್ಲದೇ ಅವಳನ್ನು ಹುಡುಕಿಕೊಂಡು ಹೋಗಲು ಸಾಧ್ಯವೆ? ಈ ಸ್ಥಿತಿಯಲ್ಲಿ ಹಾಗೆ ಮಾಡುವುದು ಒಳಿತಂತೂ ಅಲ್ಲ. ಆದ್ದರಿಂದ ಕಾಯುವುದೇ ಒಳ್ಳೆಯದು. ಅವಳಿಚ್ಛೆಯಂತೆ ಸುಮ್ಮನಿದ್ದುಬಿಡುವುದು. ಅವಳು ಸಮ್ಮತಿಸುವವರೆಗೂ ಕಾಯುವುದು' ಎಂದುಕೊಂಡು ಸುಮ್ಮನಿದ್ದ.

ಸುಮಾರು ಎಂಟು ತಿಂಗಳು ಕಳೆದು ಹೋದವು. ವಾಟ್ಸ್ಆ್ಯಪ್‌ನಲ್ಲಿ ದಾಖಲಾಗಿದ್ದ, ಅವಳೊಂದಿಗೆ ಆರಂಭದ ದಿನಗಳಲ್ಲಿ ಬರೆದುಕೊಂಡಿದ್ದ ಮೆಸೇಜ್‌ಗಳನ್ನು ಮತ್ತೆ ಮತ್ತೆ ತೆಗೆದು ಓದುತ್ತ, ಉಳಿಸಿಟ್ಟುಕೊಂಡಿದ್ದ ವಾಟ್ಸ್ಆ್ಯಪ್ ಸ್ಟೇಟಸ್‌ನ ಅವಳ ಹಲವು ಫೋಟೊಗಳನ್ನು ಮತ್ತೆ ಮತ್ತೆ ನೋಡುತ್ತ ಅವನು ಆಗಾಗ ಭಾವುಕತೆಯಲ್ಲಿ ಮುಳುಗುತ್ತಿದ್ದ. 'ಹೆಣ್ಣು ಎಷ್ಟು ಪ್ರಬುದ್ಧಳಾಗಿದ್ದರೇನು, ದೈಹಿಕ ವಿಚಾರಗಳಿಗೆ ಬಂದಾಗ ಅದೇ ಮಡಿವಂತಿಕೆ, ಸಾಂಪ್ರದಾಯಿಕ ನಡವಳಿಕೆಗಳನ್ನು ತೋರಿಸುತ್ತಾಳೆ. ಪುರುಷರ ಭಾವನೆಗಳನ್ನು, ಹಂಬಲಗಳನ್ನು ಅರ್ಥ ಮಾಡಿಕೊಳ್ಳುವ ಅಗತ್ಯವಾದರೂ ಅವರಿಗೆ ಯಾಕಿರುತ್ತದೆ' ಎಂದು ತರ್ಕ ಮಾಡಿಕೊಂಡು ಸಮಾಧಾನ ಮಾಡಿಕೊಳ್ಳುತ್ತಿದ್ದ.

ಹೀಗೆ ಎಂಟು ತಿಂಗಳು ಕಳೆದ ಬಳಿಕ ಒಂದು ದಿನ ಮೋಹನ ತನ್ನ ಸ್ನೇಹಿತನ ಮನೆಗೆ ಹೋದಾಗ, ಇಬ್ಬರೂ ಏಕಾಂತದಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಆಗ, ಮೇದಿನಿಯೊಂದಿಗೆ ನಡೆದಿದ್ದ ಮೊದಲ ಭೇಟಿಯ ಅನುಭವ, ಅವಳ ಮಾತುಗಳು, ನಡೆದುಕೊಂಡ ರೀತಿಯನ್ನೆಲ್ಲ ಕತೆಯಂತೆ ಅವನ ಮುಂದೆ ಹೇಳಿಕೊಂಡ. ಹೀಗೆ 'ಮಾಯದೇ ಉಳಿದ ಹಳೇ ಗಾಯವನ್ನು ಕೆರೆದುಕೊಂಡರೆ ಅದೆಂತಹ ಆನಂದವಾಗುತ್ತದೊ' ಹಾಗೆ ಅವಳ ಭಾವಚಿತ್ರಗಳನ್ನು ನೋಡುತ್ತ, ಅವಳು ಆಡಿದ ಮಾತುಗಳನ್ನು ಸ್ಮರಿಸಿಕೊಳ್ಳುತ್ತ, ಗೆಳೆಯನ ಮುಂದೆ ಹೇಳಿಕೊಂಡಿದ್ದು ಅವನ ಮನಸ್ಸನ್ನು ಹಗುರಗೊಳಿಸಿತು.

ಮಾರನೇ ದಿನ ಅವಳ ನೆನಪು ಯಾಕೊ ಉತ್ಕಟವಾಗಿ, ಭಾವನೆಗಳ ತಾಕಲಾಟ ಶುರುವಾಯಿತು. ಅವನು ಸುಮ್ಮನಿರಲಿಲ್ಲ. ವಾಟ್ಸ್ಆ್ಯಪ್‌ನಲ್ಲಿ ಅವಳಿಗೆ ಕೆಲವು ಸಾಲುಗಳನ್ನು ಬರೆದ.

'ಮೇದಿನಿ, ನಾನು ಕ್ಷೇಮ. ನೀವು ಹೇಗಿದ್ದೀರಿ? ದೇಶದಲ್ಲಿ ಹರಡಿರುವ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಉದ್ಯೋಗಕ್ಕೆ ಹೋಗದೇ ಸುಮಾರು ಒಂದು ತಿಂಗಳಿಂದ ನಾನು ಮನೆಯಲ್ಲಿಯೇ ಇದ್ದೇನೆ. 15 ವರ್ಷಗಳ ವೃತ್ತಿ ಬದುಕಿನಲ್ಲಿ ನನಗೆ ದೊರೆತ ದೀರ್ಘ ವಿರಾಮವಿದು. ದುಡಿದ